1. ಭದ್ರಾ ಎಡದಂಡೆ ನಾಲೆಯ 27ನೇ ವಿತರಣಾ ನಾಲೆಯ ಹೆಡ್ ಸ್ಲೂಯಿಸ್ ಪುನರ್ ನಿರ್ಮಾಣ.

2. ಭದ್ರಾ ಎಡದಂಡೆ ನಾಲೆಯ 27ನೇ ವಿತರಣಾ ನಾಲೆಯ ಅಭಿವೃದ್ಧಿ ಕಾಮಗಾರಿ.

3. ತುಂಗಾ ಯೋಜನೆ ಅಡಿಯಲ್ಲಿ:

- ತುಂಗಾ ಎಡದಂಡೆ ನಾಲೆಯ ಕಿ.ಮೀ.25.30, 25.60 ಮತ್ತು 26.10ರಲ್ಲಿರುವ ಡಿಸ್ಟ್ರಿಬ್ಯೂಟರಿಗಳ ಹೆಡ್ ಸ್ಲೂಯಿಸ್‌ಗಳ ರಿಲೀವಿಂಗ್ ವಿಯರ್‌ಗಳ ಅಭಿವೃದ್ಧಿ.
- ತುಂಗಾ ಎಡದಂಡೆ ನಾಲೆಯ ಡಿಸ್ಟ್ರಿಬ್ಯೂಟರಿ 26 ಮತ್ತು 27ಗಳ ಹೆಡ್ ಸ್ಲೂಯಿಸ್‌ಗಳ ಮತ್ತು ಕಿ.ಮೀ. 36.30, 38.20 ರಲ್ಲಿರುವ ಇನ್‌ಲೆಟ್‌ಗಳ ಅಭಿವೃದ್ಧಿ.
- ತುಂಗಾ ಎಡದಂಡೆ ನಾಲೆಯ ಡಿಸ್ಟ್ರಿಬ್ಯೂಟರಿ ಸಂ:21ಎ ಅಭಿವೃದ್ಧಿ.

ಇ) ಈ ಕಾಮಗಾರಿಗಳಿಗಾಗಿ ರೂ.2236.02 ಲಕ್ಷಗಳನ್ನು ಒದಗಿಸಲಾಗಿದೆ.

1011 (1043) ಶ್ರೀ ಹಾಲಪ್ಪ ಹೆಚ್. (ಹೊಸನಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಹೊಸನಗರ ವಿಧಾನ ಕ್ಷೇತ್ರಾಭಿವೃದ್ಧಿಯಲ್ಲಿ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಿಗೆ ಒದಗಿಸಲಾಗಿರುವ ಕಂಪ್ಯೂಟರ್‌ಗಳ ಸಂಖ್ಯೆ ಎಷ್ಟು;

ಆ) ಮುಂದಿನ ವರ್ಷದಲ್ಲಿ ಶಾಲೆಗಳಿಗೆ ಕಂಪ್ಯೂಟರ್ ಒದಗಿಸುವ ಗುರಿ ಹೊಂದಲಾಗಿದೆಯೇ;

ಇ) ಕಂಪ್ಯೂಟರ್ ಶಿಕ್ಷಣ ನೀಡಲು ಶಿಕ್ಷಕರನ್ನು ನೇಮಿಸಲಾಗಿದೆಯೇ;

ಈ) ಇಲ್ಲದಿದ್ದಲ್ಲಿ, ಕಂಪ್ಯೂಟರ್ ಶಿಕ್ಷಕರನ್ನು ಯಾವಾಗ ನೇಮಿಸಲಾಗುವುದು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೊಸನಗರದಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾಹಿತಿ ಸಿಂಧು ಯೋಜನೆಯಡಿಯಲ್ಲಿ 05 ಸರ್ಕಾರಿ ಪ್ರೌಢ

ಶಾಲೆಗಳಲ್ಲಿ ಪರಿಷ್ಕೃತ ಕ್ಲಾಸ್ ಯೋಜನೆಯಡಿಯಲ್ಲಿ 01, ಸರ್ಕಾರಿ ಪ್ರೌಢ ಶಾಲೆಯಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು ಜಾರಿಗೊಳಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಮಾಹಿತಿ ಸಿಂಧು ಯೋಜನೆ	ವರ್ಗ–ಸರ್ವರ್–ನೋಡ್ಸ್
1. ಸರ್ಕಾರಿ ಪ್ರೌಢಶಾಲೆ– ಹರನಾಳು	ಎ – 1 + 5
2. ಸರ್ಕಾರಿ ಪ್ರೌಢಶಾಲೆ–ಹೆದ್ದಾರಿಪುರ	ಬಿ – 1 + 9
3. ಸರ್ಕಾರಿ ಪದವಿಪೂರ್ವ ಕಾಲೇಜು, ಹೊಸನಗರ	ಸಿ – 1 + 14
4. ಸರ್ಕಾರಿ ಪದವಿಪೂರ್ವ ಕಾಲೇಜು, ರಿಪನ್‌ಪೇಟೆ	ಸಿ – 1 + 14
5. ಸರ್ಕಾರಿ ಪ್ರೌಢ ಶಾಲೆ ನಗರ (ಹೊಸನಗರ)	ಎ – 1 + 5

ಪರಿಷ್ಕೃತ ಕ್ಲಾಸ್ ಯೋಜನೆ

1. ಸರ್ಕಾರಿ ಪದವಿ ಪೂರ್ವ ಕಾಲೇಜು, ನಿಟ್ಟೂರು.

ಆ) ಪ್ರಸ್ತುತ ವರ್ಷದಲ್ಲಿ ಐ ಸಿ ಟಿ ಯೋಜನೆಯನ್ನು ಜಾರಿಗೊಳಿಸಲು ನಿರ್ಧರಿಸಲಾಗಿದೆ. ಈ ಯೋಜನೆಯು 2005–06ನೇ ಸಾಲಿಗೆ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆಯು ಅಂತಿಮವಾಗಿದ್ದು ತ್ವರಿತವಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು. ಈ ಯೋಜನೆಯಡಿ ಹೊಸನಗರ ತಾಲ್ಲೂಕಿನಲ್ಲಿ 03 ಸರ್ಕಾರಿ ಪ್ರೌಢ ಶಾಲೆಗಳನ್ನು ಈಗಾಗಲೇ ಆಯ್ಕೆ ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ.

1) ಸರ್ಕಾರಿ ಪ್ರೌಢ ಶಾಲೆ, ಮಾರುತಿಪುರ.

2) ಸರ್ಕಾರಿ ಪ್ರೌಢ ಶಾಲೆ, ಬೇಲೂರು.

3) ಸರ್ಕಾರಿ ಪ್ರೌಢ ಶಾಲೆ, ಅಮೃತೂರು.

ಇ) ಮತ್ತು ಈ) ಕಂಪ್ಯೂಟರ್ ಶಿಕ್ಷಣವನ್ನು ನೀಡಲು ಟೆಂಡರ್ ಪ್ರಕ್ರಿಯೆ ಮೂಲಕ ಖಾಸಗಿ ನಿರ್ವಹಣಾ ಸಂಸ್ಥೆಗಳನ್ನು ಆಯ್ಕೆ ಮಾಡಿ ಸಂಸ್ಥೆಗಳು ಅಗತ್ಯ ತರಬೇತಿದಾರರನ್ನು ನೇಮಿಸಿ ಅವರ ಸೇವೆಯನ್ನು ಶಾಲೆಗಳಿಗೆ ಒದಗಿಸುತ್ತಾರೆ.